# ಕಾವ್ಯ ಶೈವ

## 'ಕೊತ್ತಲವಾಡಿ'ಯಲ್ಲಿ ಕೆಂಡಸಂಪಿಗೆ

**ಬೆಳ್ಳಿತೆರೆಗೆ ಕಾಲಿಟ್ಟಿರುವ 'ಕೆಂಡಸಂಪಿಗೆ' ಧಾರಾವಾಹಿ ಖ್ಯಾತಿಯ ಕಾವ್ಯ ಶೈವ ತಮ್ಮ ಮೊದಲ ಸಿನಿಮಾ ಸಿದ್ಧತೆಯಲ್ಲಿದ್ದಾರೆ. ನಟನೆಯ ಹಲವು ಆಯಾಮಗಳನ್ನು ಅನ್ವೇಷಿಸುವುದಾಗಿ ಹೇಳುತ್ತಾರೆ.**

**■ ಸುಮಲತಾ ಎನ್.**



ಟೀವಿಯಲ್ಲಿ ರಿಯಾಲಿಟಿ ಶೋಗಳನ್ನು ನೋಡುತ್ತಾ ತಾವೂ ಅಂಥ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳಬೇಕು ಎಂದುಕೊಳ್ಳುತ್ತಿದ್ದ ಕಾವ್ಯ ಅವರಿಗೆ ಕಿರುತೆರೆಯತ್ತ ಬರಲು ಕಾರಣವಾಗಿದ್ದೂ ಆ ಆಸೆಯೇ.

ಮಂಡ್ಯದ ಕೆ.ಆರ್. ಪೇಟೆ ಮೂಲದ ಕಾವ್ಯ ಬೆಳೆದಿದ್ದು, ಓದಿದ್ದು ಬೆಂಗಳೂರಿನಲ್ಲಿ. ನಟನೆಯೆಡೆಗೆ ವಿಶೇಷ ಆಸಕ್ತಿ ಇಲ್ಲದಿದ್ದರೂ ಡಿಪ್ಲೊಮಾ ಎಂಜಿನಿಯರಿಂಗ್ ಅಂತಿಮ ವರ್ಷದಲ್ಲಿ ಓದುತ್ತಿದ್ದಾಗ ಅವರ ಆಲೋಚನಾಲಹರಿ ತಿರುವು ಪಡೆದುಕೊಂಡಿತು. ನಟನೆಯತ್ತ ಯಾಕೆ ಪ್ರಯತ್ನಿಸಬಾರದು ಎಂಬ ಪ್ರಶ್ನೆಯೂ ಮೂಡಿತ್ತು. ಆ ಪ್ರಶ್ನೆಯೊಂದಿಗೆ ಪ್ರಯತ್ನವನ್ನೂ ಆರಂಭಿಸಿದರು.

'ಡಿಪ್ಲೊಮಾ ಓದುವಾಗ ನನ್ನ ಯೋಚನೆಯಲ್ಲಿ ಡೈವರ್ಷನ್ ಆಯಿತು. ಆ ಸಮಯದಲ್ಲಿ ಆಡಿಷನ್‌ಗಳನ್ನು ಕೊಟ್ಟೆ. ನಟನೆ ಕಲಿಯಲು ಯಾವುದೇ ತರಬೇತಿ ಪಡೆದಿರಲಿಲ್ಲ. ಆದರೂ ನಟಿಸಬಹುದು ಎಂಬ ವಿಶ್ವಾಸ ಇತ್ತು. ಅದೇ ವಿಶ್ವಾಸ, ತೆಲುಗಿನಲ್ಲಿ ಧಾರಾವಾಹಿಯೊಂದಕ್ಕೆ ಅವಕಾಶ ತಂದುಕೊಟ್ಟಿತು. ಅಲ್ಲಿಂದ ನನ್ನ ಕಿರುತೆರೆ ಪಯಣ ಆರಂಭವಾಯಿತು' ಎಂದು ಪುಟ್ಟ ಹಿನ್ನೆಲೆ ತೆರೆದಿಟ್ಟರು ಕಾವ್ಯ.

ತೆಲುಗಿನ 'ಹಂಸಗೀತಂ' ಧಾರಾವಾಹಿಯಲ್ಲಿ ನಟಿಸಿದ ನಂತರ ಕನ್ನಡದಲ್ಲಿ ಅವಕಾಶಗಳ ಬಾಗಿಲು ತೆರೆಯಿತು. 'ಭೂಮಿ ತಾಯಾಣೆ' ಧಾರಾವಾಹಿಯಲ್ಲಿ ಸೆಕೆಂಡ್ ಲೀಡ್ ಆಗಿ ನಟಿಸಿದ ಅವರಿಗೆ ಕನ್ನಡ, ತೆಲುಗು ಎರಡು ಭಾಷೆಗಳಲ್ಲಿಯೂ ಅವಕಾಶಗಳು ದೊರೆಯುತ್ತಾ ಹೋದವು.

'ಕೆಂಡಸಂಪಿಗೆ' ಧಾರಾವಾಹಿ ಕಾವ್ಯ ಅವರಿಗೆ ಜನಮೆಚ್ಚುಗೆ ಗಳಿಸಿಕೊಟ್ಟ ಧಾರಾವಾಹಿ. ಜನ ಗುರುತು ಹಿಡಿಯಲು ಆರಂಭಿಸಿದ ಮೇಲೆ ಅವರಲ್ಲಿನ ಆತ್ಮವಿಶ್ವಾಸ ಹೆಚ್ಚಾಯಿತು. 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ರಿಯಾಲಿಟಿ ಶೋ ಅವರಲ್ಲಿನ ನೈಪುಣ್ಯಕ್ಕೆ ಇನ್ನಷ್ಟು ಮೆರುಗು ತುಂಬಿತು.

'ಧಾರಾವಾಹಿಯಲ್ಲಿ ಸಪೋರ್ಟಿಂಗ್ ಕ್ಯಾರೆಕ್ಟರ್ ಮಾಡುತ್ತಾ ಮಾಡುತ್ತಾ ನಟನೆ ಕುರಿತು ಒಂದಿಷ್ಟು ಕಲಿತೆ. ಕಿರುತೆರೆ ನಮ್ಮಂಥವರಿಗೆ ಶಾಲೆ ಇದ್ದಂತೆ. ಪ್ರತಿದಿನ ಬೇರೆ ಬೇರೆ ಶೂಟ್ ಮಾಡುತ್ತೇವೆ, ಎಲ್ಲ ರೀತಿಯ ಎಮೋಷನ್‌ಗಳನ್ನು ಪ್ರಯತ್ನಿಸುತ್ತೇವೆ. ಕಲಿಸುವ ಜಾಗವಿದು. ಇದನ್ನು ಕಲಾವಿದರ ಶಾಲೆ ಎಂದೇ ಹೇಳಬಹುದು' ಎಂದು ಧನ್ಯತೆಯಿಂದ ಹೇಳುತ್ತಾರೆ ಕಾವ್ಯ.

ಧಾರಾವಾಹಿಗಳಲ್ಲಿ ಬ್ಯುಸಿ ಇದ್ದ ಸಮಯದಲ್ಲಿಯೇ ಸಿನಿಮಾ ಅವಕಾಶಗಳು ಬಂದರೂ ಹಿಂದೇಟು ಹಾಕಿದ್ದರು.

'ನನಗೆ ಸಿನಿಮಾದಲ್ಲಿ ನಟಿಸಬೇಕೆಂಬ ಆಲೋಚನೆಯೂ, ಆತ್ಮವಿಶ್ವಾಸವೂ ಇರಲಿಲ್ಲ. ಹೀಗಾಗಿ ಸೀರಿಯಲ್ ಮಾಡುತ್ತಿದ್ದಾಗಲೇ ಅವಕಾಶ ಬಂದರೂ ಮನಸ್ಸು ಮಾಡಿರಲಿಲ್ಲ. ಆದರೆ ಸ್ವಲ್ಪ ಸಮಯ ಸೀರಿಯಲ್‌ನಿಂದ ಬ್ರೇಕ್ ತೆಗೆದುಕೊಂಡಿದ್ದೆ. ಆ ಬಿಡುವಿನಲ್ಲೇ ಒಂದು ಒಳ್ಳೆಯ ಸಿನಿಮಾ ಅವಕಾಶ ಬಂತು. ಸಿನಿಮಾ ತಾಂತ್ರಿಕವಾಗಿ ಪ್ರಬಲವಾಗಿದೆ, ಅನುಭವಿ ಕಲಾವಿದರ ಕಾಸ್ಟಿಂಗ್ ಇದೆ, ಕಲಾವಿದೆಯಾಗಿ ಇದು ಉತ್ತಮ ವೇದಿಕೆಯಾಗಬಹುದು ಎನಿಸಿತು' ಎಂದು ವಿಶ್ವಾಸದಿಂದ ನುಡಿಯುತ್ತಾರೆ ಅವರು.

ನಟ ಯಶ್ ತಾಯಿ ಪುಷ್ಪ ಅರುಣ್ ಕುಮಾರ್ ಸಿನಿಮಾ ನಿರ್ಮಾಣ ಸಂಸ್ಥೆಯ ಮೊದಲ ಸಿನಿಮಾ 'ಕೊತ್ತಲವಾಡಿ'ಯಲ್ಲಿ ನಟ ಪೃಥ್ವಿ ಅಂಬರ್‌ಗೆ ಜೋಡಿಯಾಗಿ ಕಾವ್ಯ ನಟಿಸುತ್ತಿದ್ದಾರೆ. ಬಿಡುವು ಸಿಕ್ಕಾಗಲೆಲ್ಲ ಯಾವುದೇ ಭಾಷೆಯ, ಎಲ್ಲ ಜಾನರ್‌ನ ಸಿನಿಮಾಗಳನ್ನೂ ನೋಡುವ ಅಭ್ಯಾಸವಿರುವ ಕಾವ್ಯ ಅವರಿಗೆ ಆ್ಯಕ್ಷನ್ ಎಂದರೆ ಅಷ್ಟಕ್ಕಷ್ಟೆ.

'ನನಗೆ ಆ್ಯಕ್ಷನ್ ಬಿಟ್ಟು ಬೇರೆಲ್ಲಾ ಪ್ರಕಾರದ ಕಥೆಗಳೂ ಇಷ್ಟ. ಸಸ್ಪೆನ್ಸ್, ಫ್ಯಾಮಿಲಿ ಡ್ರಾಮಾ, ಲವ್ ಸ್ಟೋರಿಗಳು ಬಹಳ ಇಷ್ಟ. ಆ್ಯಕ್ಷನ್ ಎಂದರೆ ದೂರ' ಎನ್ನುತ್ತಾರೆ.

ಸಿನಿಮಾರಂಗದಲ್ಲಿ ಮೊದಲ ಹೆಜ್ಜೆ ಇಟ್ಟಿರುವ ಅವರಲ್ಲೀಗ ಸಹಜವಾಗಿಯೇ ಆತಂಕ, ತವಕ ತಲ್ಲಣ, ನಿರೀಕ್ಷೆಗಳಿವೆ. ಇವುಗಳ ನಡುವೆಯೂ ತಾವು ಉತ್ತಮ ಪರ್ಫಾರ್ಮರ್ ಎಂದು ಕರೆಸಿಕೊಳ್ಳಬೇಕೆಂಬ ಆಸೆಯೂ ತುಂಬಿದೆ. ■